# ವಿರಹ ಮಿಲನ

ಹಕ್ಕಿಗಳು ವಲಸೆ ಹೋಗುವ ನೈಸರ್ಗಿಕ ವಿದ್ಯಮಾನ ಎಲ್ಲರಿಗೆ ತಿಳಿದ ಸಂಗತಿಯೇ ಆಗಿದೆ. ಅನುಕೂಲವಾದ ಪರಿಸರವನ್ನು ಹುಡುಕಿಕೊಂಡು ತಾವು ಇದ್ದ ನೆಲೆಯಿಂದ ಬಹುದೂರ, ನದಿ-ಕಡಲುಗಳನ್ನು ದಾಟಿ, ಖಂಡ ಖಂಡಗಳನ್ನು ದಾಟಿ ಹಕ್ಕಿಗಳು ವಲಸೆ ಬರುತ್ತವೆ. ಹಾಗೆ ವಲಸೆ ಬಂದರೂ ತಾವು ಬಿಟ್ಟು ಬಂದ ಪರಿಸರವನ್ನು ನೆನೆಯುತ್ತಲೂ ಇರುತ್ತವೆ ಎನ್ನಬೇಕು. ಆದುದರಿಂದಲೇ ತಾವು ಬಂದ ಕೆಲಸವಾದ ಮೇಲೆ ಅಂದರೆ ಗೂಡುಕಟ್ಟಿ ಮೊಟ್ಟೆ ಇಟ್ಟು ಸಂತತಿಯನ್ನು ಬೆಳೆಸಿದ ಮೇಲೆ ಮರಳಿ ತಮ್ಮ ಮೂಲ ನೆಲೆಗೆ ಅವು ಹಿಂತಿರುಗುತ್ತವೆ. ಹಕ್ಕಿಗಳ ಮನದಾಳದಲ್ಲಿ, ಅವುಗಳ ಅಸಂಖ್ಯ ಜೀವಕೋಶಗಳಲ್ಲಿ ತಾವು ಅಗಲಿ ಬಂದ ತಮ್ಮ ಮೂಲ ನೆಲೆಯ ನೆನಪು ಜೀವಂತವಾಗಿ ಹುದುಗಿರುತ್ತದೆ. ಹಕ್ಕಿಗಳು ದೈಹಿಕವಾಗಿ ಮಾತ್ರ ತಮ್ಮ ಮೂಲ ಪರಿಸರವನ್ನು ಅಗಲಿ ಬಂದಿವೆ ಅಷ್ಟೆ. ತಮ್ಮ ಒಳಮನದಲ್ಲಿ ಅವು ಎಂದೂ ತಮ್ಮ ಮೂಲವನ್ನು ಅಗಲಿರಲಿಲ್ಲ ಎಂದು ತಿಳಿಯುತ್ತದೆ. ಇಲ್ಲೊಂದು ಚಮತ್ಕಾರವಿದೆ. ಅಗಲದೆ, ಅಗಲಿದ್ದನ್ನು ನೆನೆಯುವುದು ಸಾಧ್ಯವಿಲ್ಲವಲ್ಲವೆ? ಅಗಲದೆ ನೆನೆಯುವಿಕೆ ಇಲ್ಲ. ನೆನೆಯದೆ ಪುನರ್ಮಿಲನವಿಲ್ಲ. ನೆನೆಯುವುದೆನ್ನುವ ಧ್ಯಾನ ಸಮೀಪದ ಅಂತರ್ಮುಖಿಯಾದ ಮನೋಧರ್ಮ ಮತ್ತು ಅಗಲಿಕೆ ಎನ್ನುವ ಬಹಿರ್ಮುಖ ಚಟುವಟಿಕೆ ಒಂದರೊಳಗೊಂದು ಹುದುಗಿಕೊಂಡಿವೆ. ಇವು ಪರಸ್ಪರ ಅಗಲಿಲ್ಲ. ಅಗಲಿದಂತೆ ಇದ್ದರೂ ಅಗಲಿಲ್ಲ! ಈ ಪುನರ್ಮಿಲನದ ಅನುಭವವು ಬದುಕಿನ ಜೀವಾಳವೆಂಬಂತೆ ನನಗೆ ತೋರುತ್ತದೆ. ವಲಸೆ ಬರುವ ಹಕ್ಕಿಗಳಿಗೆ ಕೂಡ ಈ ನಿಜ ತಿಳಿದಿದೆ.

ಕುತೂಹಲದ ವಿಷಯವೆಂದರೆ, ಅಗಲಿಕೆ ಮತ್ತು ಪುನರ್ಮಿಲನ - ಭಕ್ತಿಯ ಪರಿಭಾಷೆಯೇ ಆಗಿರುವುದು. ಕನ್ನಡದ ದೊಡ್ಡ ಪ್ರತಿಭೆ ಅಕ್ಕಮಹಾದೇವಿ ತಾನು ತನ್ನ ಚೆನ್ನಮಲ್ಲಿಕಾರ್ಜುನನನ್ನು ನೆನೆಯುವುದನ್ನು ಹಿಂಡನಗಲಿದ ಸಲಗ ತನ್ನ ವಿಂಧ್ಯವ ನೆನೆವಂತೆ ನೆನೆವೆವಯ್ಯಾ ನಿಮ್ಮ ಎಂದು ಅದ್ಭುತವಾಗಿ ಉಪಮಿಸುತ್ತಾಳೆ. ಸಲಗ, ಹಿಂಡನ್ನು ಅಗಲದೆ ಅದಕ್ಕೆ ತನ್ನ ಏಕಾಂಗಿತನದ ತಬ್ಬಲಿತನದ ಅರಿವಾಗದು. ಹಿಂಡನ್ನು ಅಗಲುವ ಮುನ್ನ ತನ್ನ ವಿಂಧ್ಯ, ತನ್ನ ಹಿಂಡು, ತಾನು ಇವೆಲ್ಲ ಅಖಂಡವಾಗಿ ಒಂದಾಗಿತ್ತು. ಅಖಂಡತೆಯ ಆ ಭಾವದಲ್ಲಿ ತಾನು ಬೇರೆ, ತನಗೊಂದು ಬೇರೆಯೇ ಆದ ವ್ಯಕ್ತಿತ್ವವಿದೆ ಎಂಬ ಭಾವನೆಯೇ ಉಂಟಾಗಿರಲಿಲ್ಲ. ಅದೊಂದು ಮುಗ್ಧ ಬಾಲ್ಯವಾಗಿತ್ತು. ಯಾವುದೋ ಕಾರಣದಿಂದ ಹಿಂಡನ್ನು ಆನೆ ಅಗಲಬೇಕಾಗಿ ಬಂತು. ಅಗಲಿದ ಆನೆಗೆ ಈ ಒಂಟಿತನ ಅಸಹಜವಾದದ್ದು; ವಿಲಕ್ಷಣವಾದದ್ದು ಎಂಬ ಅರಿವು, ಅಪಾಯಕಾರಿಯೂ ಆದದ್ದು ಎಂಬ ಅರಿವು ಇವೆಲ್ಲ ಉಂಟಾಗಿವೆ. ಆಗ, ತಾನು ಅಗಲಿ ಬಂದ ತನ್ನ ವಿಂಧ್ಯದ ನೆನಪು ತನ್ನೊಳಗಿಂದ ಉತ್ಕಟವಾಗಿ ಒತ್ತರಿಸಿ ಬಂದಿದೆ.

ಬದುಕಿನಲ್ಲಿ ಅಗಲುವಿಕೆ ಅನಿವಾರ್ಯವೆನ್ನಬಹುದು. ಅಥವಾ ಬದುಕೆಂದರೇ ಅಗಲಿಕೆ ಎನ್ನಬಹುದು. ಹೊಕ್ಕುಳ ಬಳ್ಳಿ ತುಂಡರಿಸಿ ಮಗು ಬೇರ್ಪಡಲೇಬೇಕು. ಬೇರ್ಪಟ್ಟು ತನ್ನ ಪ್ರತ್ಯೇಕ ಅಸ್ತಿತ್ವವನ್ನೂ ಅದರ ಯಾತನೆಯನ್ನೂ - ಸ್ವಲ್ಪಮಟ್ಟಿಗೆ ತನ್ನ ಪ್ರತ್ಯೇಕ ಅಸ್ತಿತ್ವದ ಸಂಭ್ರಮವನ್ನೂ ಅನುಭವಿಸಲೇಬೇಕು. ಯಾತನೆಯ ಕಾರಣದಿಂದಲೇ, ತಾನು ಪಡೆದ ಪ್ರತ್ಯೇಕ ಅಸ್ತಿತ್ವದ ಅನುಭವವು ಸಂದೇಹಾಸ್ಪದವಾಗಿಯೂ ಪ್ರಶ್ನಾರ್ಹವಾಗಿಯೂ ಜಿಜ್ಞಾಸೆಗೆ ಯೋಗ್ಯವಾಗಿಯೂ ಕಾಣಿಸುವುದು. ಅಗಲಿಕೆಯ ನೋವು ತೀವ್ರವಾದಂತೆ ತಾನು ಯಾವುದರಿಂದ ಅಗಲಿ ಬಂದೆನೋ ಅದರ ನೆನಪೂ ಅಷ್ಟೇ ತೀವ್ರವಾಗಿ ಮೇಲೇಳುವುದು. ಇದೊಂದು ಸೋಜಿಗ! ಅಗಲಿಕೆಯ ನೋವು ಅಗಲಿ ಬಂದುದರ ನೆನಪನ್ನು ಉದ್ಬುದ್ಧಗೊಳಿಸುವ ಸೋಜಿಗ! ನಮ್ಮೊಳಗೇ ನಡೆಯುವ ಈ ಸೋಜಿಗವನ್ನು ಭಕ್ತಿ ಎನ್ನುವೆವು.

ಅಕ್ಕ, ಲೋಕದ ಜೊತೆ ಮಾತಾಡುತ್ತಿಲ್ಲ. ತನ್ನ ಇಷ್ಟದೈವದ ಜೊತೆ ಮಾತಾಡುತ್ತಿದ್ದಾಳೆ. ನಿಜ. ಆದರೆ ತನ್ನ ಅವಸ್ಥೆಯನ್ನು ತನ್ನ ಇಷ್ಟದೈವಕ್ಕೆ ಮನವರಿಕೆ ಮಾಡಿಕೊಡುವಲ್ಲಿ, ಅಕ್ಕ, ಲೋಕದಿಂದ ಸಹಾಯವನು ಪಡೆದಿದ್ದಾಳೆ. ಹಿಂಡನಗಲಿದ ಸಲಗದ ಚಿತ್ರವನ್ನು ಲೋಕವೇ ಅಕ್ಕನಿಗೆ ಒದಗಿಸಿದುದಲ್ಲವೆ? ಅಂದರೆ ಅಕ್ಕನಂಥವರಿಗೆ, ತನ್ನ ಒಳಗಿನ ನಿಜ ತನಗೆ ತಿಳಿದಾಗ, ಲೋಕದ ನಿಜವೂ ತಿಳಿದು ಬರುವುದು. ಅದುವರೆಗೆ ತನ್ನ ನಿಜ ತನಗೆ ತಿಳಿದು ಬರುವವರೆಗೆ - ಲೋಕದ ನಿಜವೂ ತಿಳಿದು ಬರುವುದಿಲ್ಲ. ತಿಳಿದು ಬಂದಾಗ, ತನ್ನ ಅವಸ್ಥೆಯನ್ನು ಮಾತ್ರವಲ್ಲ, ಲೋಕದ ಆಂತರಿಕ ಅವಸ್ಥೆಯನ್ನೂ ತನ್ನ ಮಾತಿನಿಂದ ತೋಡಿಕೊಂಡಂತೆಯೂ ಆಗುವುದು. ತನ್ನ ಮಾತು ತನ್ನದೇ ಮಾತೂ ಹೌದು. ಲೋಕದ ಪರವಾಗಿ ತಾನು ಆಡುತ್ತಿರುವ ಮಾತೂ ಹೌದು! ಭಕ್ತಿಯು ಲೋಕಕ್ಕೆ ಸ್ಪಂದಿಸುವ ಬಗೆ ಇದು. ಭಕ್ತಿಗೆ ಲೋಕ ಸ್ಪಂದಿಸುವುದೇನೂ ಅಚ್ಚರಿಯಲ್ಲ.

ಗೀತೆಯಲ್ಲಿ ಕೃಷ್ಣ; ಅರ್ಜುನನೊಡನೆ ಮಾರ್ಮಿಕವಾದ ಒಂದು ಗುಟ್ಟನ್ನು ನುಡಿಯುವನು. ಅದೆಂದರೆ: ನಾನೂ ನೀನೂ ಒಡನಾಡಿಗಳು ಎಂಬ ಗುಟ್ಟು. ನಾನೂ ನೀನೂ ಎಂದರೆ ಕೃಷ್ಣ ಮತ್ತು ಅರ್ಜುನ. ಜೀವ ಮತ್ತು ದೇವ. ಜನುಮಜನುಮಗಳಲ್ಲಿ - ನಿರಂತರ ಈ ಒಡನಾಟ ನಡೆದುಕೊಂಡು ಬಂದಿದೆ; ಈ ಒಡನಾಟದ ಸಕಲ ವಿವರಗಳೂ ತನಗೆ ಗೊತ್ತು ಎನ್ನುತ್ತಾನೆ ಕೃಷ್ಣ. ಆದರೆ ಅರ್ಜುನನಿಗೆ ಅವನ ಅಸೂಕ್ಷ್ಮತೆಯಿಂದಾಗಿಯೇ ಹೀಗೊಂದು ಒಡನಾಟ ನಡೆದಿದೆ ಎಂದೇ ತಿಳಿದು ಬಂದಿಲ್ಲ ಎಂದು ಕೂಡ ಕೃಷ್ಣ ನುಡಿಯುತ್ತಾನೆ. ಆದರೆ ಒಂದಲ್ಲ ಒಂದು ದಿನ ಈ ಒಡನಾಟದ ನಿಜ ತಿಳಿಯುತ್ತದೆ; ತಿಳಿಯಲೇಬೇಕು; ಆ ದಿನವನ್ನು ತಾನು ಕಾದುಕೊಂಡಿರುವೆ ಇತ್ಯಾದಿ ಅರ್ಥಗಳು ಕೃಷ್ಣನ ಮಾತುಗಳಲ್ಲಿ ಕೇಳಿಸುತ್ತದೆ. ನಮ್ಮ ಬದುಕಿನಲ್ಲಿ ಎಲ್ಲರೂ ಕೈಬಿಟ್ಟ ಹಾಗಿನ ಒಂದು ಸಂದರ್ಭ ಬಂದು ತನಗೆ ಒಡನಾಡಿಗಳೇ ಇಲ್ಲ ಎನ್ನುವ ಭಾವ ಉಂಟಾದಾಗ, ಎಲ್ಲರಿಂದ ಅಗಲಿದಾಗ, ಎಂದೆಂದೂ ಅಗಲದೆ ಇರುವ ನಮ್ಮ ನಿಜವಾದ ಒಡನಾಡಿಯ ನೆನಪು ಉಂಟಾಗಬಹುದು! ಕಲ್ಪನೆಯಿಂದ ಅಗಲುವುದಕ್ಕೂ ನಿಜದ ನೆನಪು ಉದ್ಬುದ್ಧವಾಗುವುದಕ್ಕೂ ಹತ್ತಿರದ ಸಂಬಂಧವಿದೆ.

■ **ತೋಷ**

## ಮಾತೇ ಮುತ್ತು

★ ಮೌನ ಎನ್ನುವುದು ದೇವರ ಭಾಷೆ; ಉಳಿದದ್ದೆಲ್ಲವೂ ಕಳಪೆ ಅನುವಾದಗಳು.
-ಜಲಾಲುದ್ದೀನ್ ರೂಮಿ

★ ನಿಮ್ಮಲ್ಲಿ ನಿಮಗೆ ವಿಶ್ವಾಸ ಬಾರದಿದ್ದರೆ, ದೇವರ ಮೇಲೂ ವಿಶ್ವಾಸ ಬರಲು ಸಾಧ್ಯವಿಲ್ಲ.
-ಸ್ವಾಮಿ ವಿವೇಕಾನಂದ

★ ನಮ್ಮ ಮಿತಿಗಳನ್ನು ನಾವು ಮೊದಲು ಅರಿತುಕೊಂಡರೆ, ಆ ಬಳಿಕ ಅವುಗಳನ್ನು ದಾಟಬಹುದು.
-ಆಲ್ಬರ್ಟ್ ಐನ್‌ಸ್ಟೀನ್

★ ಜನರನ್ನು ಪ್ರೀತಿಸುವುದಕ್ಕಿಂತ ಹೆಚ್ಚು ಕಲಾತ್ಮಕವಾದದ್ದು ಯಾವುದೂ ಇಲ್ಲ.
-ವಿನ್ಸೆಂಟ್ ವ್ಯಾನ್‌ಗೋ

★ ಮನುಷ್ಯಕುಲದ ಬಳಿ ಇರುವುದು ಒಂದೇ ಶಕ್ತಿಶಾಲಿ ಆಯುಧ. ಅದರ ಹೆಸರು ನಗು.
-ಮಾರ್ಕ್ ಟ್ವೈನ್

★ ಕಲೆಯಿಂದ ಮಾತ್ರ ನಮ್ಮ ಪರಿಪೂರ್ಣತೆಯನ್ನು ಅಳೆಯಲು ಸಾಧ್ಯ.
-ಆಸ್ಕರ್ ವೈಲ್ಡ್

★ ಇರುವುದೊಂದೇ ಚಿನ್ನ; ಅದುವೇ ಪ್ರೀತಿ.
-ಆಲ್‌ಫ್ರೆಡ್ ಟೆನಿಸನ್

★ ಎಲ್ಲರೂ ಒಗ್ಗೂಡಿ ಮುನ್ನಡೆದರೆ ಯಶಸ್ಸು ತನ್ನಷ್ಟಕ್ಕೇ ಹಿಂಬಾಲಿಸುತ್ತದೆ.
-ಹೆನ್ರಿ ಫೋರ್ಡ್

★ ಸ್ವರ್ಗದ ಜತೆ ಮಾತನಾಡಲು ಭೂಮಿ ನಡೆಸುತ್ತಿರುವ ಸತತ ಪ್ರಯತ್ನಗಳೇ ಮರಗಳು.
-ರಬೀಂದ್ರನಾಥ ಠಾಗೋರ್

★ ನಮ್ಮನ್ನು ಅರಳಿಸುವ ಸಂಗತಿಗಳೇ ನಾಶ ಕೂಡಾ ಮಾಡುತ್ತವೆ.
-ಏಂಜೆಲಿನಾ ಜೋಲಿ

★ ಪ್ರೀತಿ ಎಲ್ಲ ಋತುಗಳಿಗೂ ಅತೀತವಾದದ್ದು. ವಸಂತ ಬರದಿದ್ದರೂ ಶಿಶಿರ ಇಲ್ಲದಿದ್ದರೂ ಪ್ರೀತಿ ಸದಾ ಹಸಿರು.
-ರೂಮಿ

★ ನಿಮ್ಮ ಸುತ್ತ ಇನ್ನೂ ಉಳಿದಿರುವ ಸೌಂದರ್ಯವನ್ನು ನೋಡಿ ಸಂತೋಷಪಡಿ.
-ಆನ್ನೆ ಫ್ರಾಂಕ್